ತೋರದಿರುವ ಯಜಮಾನರ ಮೇಲಿನ ಒಂದು ಸಣ್ಣ ಪ್ರತೀಕಾರ ಅದರಲ್ಲಿತ್ತು.

ಶೂವನ್ನು ಕಡಿದು ಸಾಕಾಗುವಷ್ಟರಲ್ಲಿ ಇನ್ನು ಇದು ಬೇಕೋ, ಎಂದು ಆಲೋಚಿಸುತ್ತಿರುವಾಗ ಹೊರಗಿನಿಂದ ಒಂದು ಅಲುಗಾಟ ಮತ್ತು ಗುಸುಗುಸು ಕೇಳಿಸಿತು. ನೋಡಿದಾಗ ಗೊತ್ತಾಯಿತು. ಹೆಗ್ಗಣದ ನಿಶಾ ಸಂಚಾರ. ಬೇರೆ ಸಂದರ್ಭದಲ್ಲಾಗಿದ್ದರೆ ರೋಸಿ ಅವನನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಆದರೆ, ಈಗ ಸಾಧ್ಯವಿಲ್ಲ. ಎಂತಹಾ ಆಯಾಸ. ಊಟ ಕಂಡುದು ಮಧ್ಯಾಹ್ನ... ಅವಳು ಮತ್ತೆ ಮನೆಗೆ ಪ್ರದಕ್ಷಿಣೆ ಹಾಕಿದಳು.

ಅಡುಗೆಕೋಣೆಯಿಂದ ಹೊರಗೆ ಹೋಗುವ ಕೊಳವೆ ಚರಂಡಿಯಲ್ಲಿ ನೀರು ಕಟ್ಟೆ ಕಟ್ಟಿ ನಿಂತಿದೆ. ಅವಳು ಅದರ ಸಮೀಪದಲ್ಲಿ ಮುಖವಿಟ್ಟು ನೋಡಿದಳು. ಗಂಜಿ ನೀರಿನ ಬಿಸಿಯಾದ ಪರಿಮಳವಿದೆ. ಅವಳದನ್ನು ನೆಕ್ಕಿ ಕುಡಿದಳು.

ಜಗತ್ತಿನ ಸರ್ವ ಮನುಷ್ಯ ಜೀವಿಗಳನ್ನು, ಜಿಮ್ಮಿಯನ್ನು ಶಪಿಸುತ್ತ ರೋಸಿ ಸೌದೆಕೊಟ್ಟಿಗೆಯ ತನ್ನ ಜಾಗದಲ್ಲಿ ಮಲಗಿದಳು...

ಗರಿಗಳ ನಡುವಿನಿಂದ ಸೂರ್ಯರಶ್ಮಿಗಳು ಒಳಗೆ ಇಣಿಕಿ ನೋಡುತ್ತಿದ್ದಾಗ ರೋಸಿ ಮೆಲ್ಲನೆ ಎದ್ದಳು. ಹಿಂದಿನ ದಿನದ ಉಪವಾಸ ಅವಳನ್ನು ತುಂಬಾ ಬಾಧಿಸಿತ್ತು. ದೇಹವನ್ನು ಕೊಡವಿ ರೋಮಗಳ ನಡುವೆ ಸಿಕ್ಕಿಕೊಂಡಿದ್ದ ಮಣ್ಣ ಕಣಗಳು ಒಂದು ಪಟಲವನ್ನು ಸೃಷ್ಟಿಸಿದ ಬಳಿಕ ನೆಲವನ್ನು ನಾಲ್ಕು ಬಾರಿ ಗೀರಿದಳು. ರೋಸಿ ಸೌದಿಕೊಟ್ಟಿಗೆಯಿಂದ ಹೊರಗಿಳಿದಳು. ಆಗ ಕಂಡ ದೃಶ್ಯ... ಜಿಮ್ಮಿ ಇಡ್ಲಿ ಚೆನ್ನಾಗಿ ಬಾರಿಸುತ್ತಿದ್ದಾನೆ!... ಹಸಿವೆಯನ್ನು ಸಹಿಸಲಾರದೆ ಅವಳು ತನ್ನ ಹಾಗೂ ಜಿಮ್ಮಿಯ ಅಂತಸ್ತು, ಅಂತರಗಳನ್ನು ಮರೆತಳು. ಅವಳು ಜಿಮ್ಮಿಯ ಪ್ಲೇಟಿನೆಡೆಗೆ ಬಾಯಿಹಾಕಿದಳು.

ಜಿಮ್ಮಿ ತನ್ನ ಅಂತಸ್ತನ್ನು ಸ್ಪಷ್ಟವಾಗಿ ಕಾಯ್ದುಕೊಳ್ಳುವ ಸ್ವಭಾವದವನಾಗಿದ್ದ. ಅವನು ಅಕ್ರಮವಾಗಿ ಬಂದ ಆ ದರಿದ್ರ ನಾಯಿಯ ಕೊರಳನ್ನು ಹಿಡಿದ.

ರೋಸಿ ಅದನ್ನು ನಿರೀಕ್ಷಿಸಿರಲಿಲ್ಲ. ಜಿಮ್ಮಿ ತನ್ನನ್ನು ಆಕ್ರಮಿಸಬಹುದೆಂದು ಭಾವಿಸಿಯೂ ಇರಲಿಲ್ಲ. ಬಡಪಾಯಿಯಾದರೂ ರೋಸಿಗೆ ಸ್ವಾಭಿಮಾನವಿತ್ತು. ಅವಳು ಬಿಟ್ಟುಕೊಡಲಿಲ್ಲ. ಜಿಮ್ಮಿಯ ಹಲ್ಲುಗಳಿಂದ ಬಿಡಿಸಿಕೊಂಡು ಅವಳು ಅವನ ಮೇಲೇರಿ ಹೋದಳು. ಶಬ್ದ ಕೇಳಿ ಮನೆಯವರೆಲ್ಲ ಒಂದು ಸೇರಿದರು...

ಯಜಮಾನರ ಅನ್ನದ ಸಾಮರ್ಥ್ಯವನ್ನು ಜಿಮ್ಮಿಯೇ ತೋರಿಸಿ ಕೊಡಬಹುದೆಂಬ ಭಾವದಿಂದ ಮನೆಯವರೆಲ್ಲರೂ ನೋಡುತ್ತ ನಿಂತರು.

"ಅಮ್ಮ, ರೋಸಿಯನ್ನು ಈಗ ಕೊಂದು ಬಿಡಬಹುದು. ಜಿಮ್ಮಿಯನ್ನು ಕರೆಯಿರಿ!..."

ಮಗಳು ದಯೆ ತೋರಿದಳು.

"ಕರಿಯಬೇಡಿ. ಆ ದರಿದ್ರ ನಾಯಿಗೆ ಹಾಗೆಯೇ ಆಗಬೇಕು..."

"ಹಿಡಿಯೋ ಜಿಮ್ಮಿ, ಹಿಡಿ..."

ಕುಟ್ಟನ್ ಜಿಮ್ಮಿಯನ್ನು ಹುರಿದುಂಬಿಸಿದ.

ರೋಸಿಗೆ ಜಿಮ್ಮಿ ಮರೆಯಲಾರದ ಒಂದು ಪಾಠವನ್ನು ಕಲಿಸಿಯೇ ಸುಮ್ಮನಾಗುವನು. ಅವನು ಒಂದು ಇಲಿಯನ್ನು ಕಚ್ಚಿ ಹಿಡಿಯುವಂತೆ ರೋಸಿಯನ್ನು ಕಚ್ಚಿಹಿಡಿದ. ಗಾಯಗೊಂಡ ದೇಹದೊಡನೆ ದೂರ ಸರಿಯದೆ, ಜಯಿಸಿದ ಅಭಿಮಾನದಿಂದ ಜಿಮ್ಮಿ ನೋಡುತ್ತ ನಿಂತ.

ಕುಟ್ಟ ಜಿಮ್ಮಿಯ ತಲೆ ಸವರಿಕೊಂಡು ಹೇಳಿದ:

"ನೀನೇ ಸಮರ್ಥ. ನೋಡಿದಿರಾ ದರಿದ್ರ ನಾಯಿ ಹೋಗುವುದನ್ನು..."

ರೋಸಿ ಚಿಂತಾಧೀನೆಯಾಗಿ ಒಂದು ಗಿಡದ ನೆರಳಿನಲ್ಲಿ ಹೋಗಿ ಮಲಗಿದಳು. ಅವಳ ಮನಸ್ಸಿನಲ್ಲಿ